ಜಯಂತಿಲಾಲ್ ಕಂಪನಿಯ ಒಳಹೊಕ್ಕು ಅದರ ಸ್ಥಾಪಕ ಜಯಂತಿಲಾಲ್ ಮುಂದೆ ಕುಳಿತು ತನ್ನ ಪರಿಚಯವನ್ನು ಹೇಳಿಕೊಂಡ. ಜಯಂತಿಲಾಲ್ ನಕ್ಕು 'ಅಚ್ಛಾ ನಿಮ್ಮ ಬಿಸಿನೆಸ್‌ಗಿಂತ ನಮ್ಮ ಬಿಸಿನೆಸ್ಸಲ್ಲಿ ತುಂಬಾ ರಿಸ್ಕ್ ಮಫತ್ಲಾಲ್ ಜಿ. ಹುಟ್ಟಿದ ಪ್ರತಿಯೊಬ್ಬನಿಗೂ ಬಟ್ಟೆ ಬೇಕೇಬೇಕು. ಆದರೆ ವಜ್ರಗಳು ಹಾಗಲ್ಲ, ಶ್ರೀಮಂತರೇ ಖರೀದಿಸಬೇಕು. ವ್ಯಾಪಾರದಲ್ಲಿ ಸಾಮಾನ್ಯ ಜನರನ್ನು ಯಾಮಾರಿಸಿದಷ್ಟು ಸುಲಭವಾಗಿ ಶ್ರೀಮಂತರನ್ನು ಯಾಮಾರಿಸಲು ಸಾಧ್ಯವಿಲ್ಲ' ಎಂದು ನಕ್ಕಿದ್ದ ಜಯಂತಿ ಲಾಲ್. ಅಷ್ಟರಲ್ಲಿ ಬಿಸಿ ಬಿಸಿ ಬಾದಾಮ್ ಹಲ್ವ ಬಂದಿತ್ತು. ಹಲ್ವ ತಿನ್ನುತ್ತಾ ಗುನ್ನಾಲಾಲ್ ತಾನು ಬಂದ ಕಾರಣವನ್ನು ಹೇಳಿದ್ದ.

'ಓಹ್! ಬಾರಿ ಇಂಟರೆಸ್ಟಿಂಗ್ ಸ್ಟೋರಿ ಹಾಗಾದರೆ. ನಮ್ಮ ಹುಡುಗರೇ ಹಾಗೆ, ಚಿಕ್ಕ ವಯಸ್ಸಿಗೇ ರೂಪಕ್ಕೆ ಸೋತು ಪ್ರೇಮಪಾಶದಲ್ಲಿ ಬಹಳ ಬೇಗನೆ ಸಿಕ್ಕಿ ಹಾಕಿಕೊಳ್ಳುತ್ತಾರೆ. ನೋಡಿ, ನನ್ನ ತಮ್ಮನ ಮಗ ಹೋದ ವರ್ಷ ಯಾವನೊ ಮರಾಠಿ ಪೊಲೀಸ್ ಕಾನ್ಸ್‌ಟೇಬಲ್ ಮಗಳನ್ನು ಪ್ರೀತಿಸಿ ಅವಳೊಂದಿಗೆ ಪೂನಾಕ್ಕೆ ಓಡಿಹೋಗಿದ್ದ. ನಾನು ಖುದ್ದು ನಮ್ಮ ಜೂರಿಸ್ಡಿಕ್ಷನ್ ಡಿಸಿಪಿ ಸಾಹೇಬರ ಮನೆಗೆ ಹೋಗಿ ಎಪ್ಪತ್ತೆಂಟು ಲಕ್ಷದ ಒಂದು ಡೈಮಂಡ್ ನೆಕ್ಲೇಸನ್ನು ಡಿಸಿಪಿ ಸಾಹೇಬರ ಮೇಡಂನವರ ಕೈಗಿಟ್ಟು ಕಷ್ಟ ಹೇಳಿಕೊಂಡೆ. ಮೂರೇ ಗಂಟೆಗಳಲ್ಲಿ ಇಬ್ಬರು ಎಲ್ಲಿದ್ದಾರೆಂದು ತಲಾಶು ಮಾಡಿ ಕರೆದುಕೊಂಡು ಬಂದಿದ್ದರು. ಆದರೆ ದೊಡ್ಡ ಹೈಡ್ರಾಮನೇ ನಡೆದುಹೋಯ್ತು. ಆ ಹುಡುಗಿ ಸುಮ್ಮನಿದ್ದರೂ ನಮ್ಮ ಹುಡುಗನೇ ಅವಳಿಲ್ಲದಿದ್ದರೆ ನೇಣು ಹಾಕಿಕೊಂಡು ಸತ್ತೇ ಹೋಗುವುದಾಗಿ ಬೆದರಿಸಿಬಿಟ್ಟ. ಒಬ್ಬನೇ ಮಗ ಎಂದು ನನ್ನ ತಮ್ಮನೂ ಕಣ್ಣೀರು ಹಾಕಿಕೊಂಡ. ಇನ್ನೂ ಒಂದು ವಿಷಯವೆಂದರೆ, ಹುಡುಗಿಯ ಅಮ್ಮನಿಗೂ ನಮ್ಮ ಡಿಸಿಪಿ ಸಾಹೇಬರಿಗೂ ಮೊದಲಿನಿಂದಲೂ ಸ್ನೇಹವಂತೆ. ಹಾಗಾಗಿ ಡಿಸಿಪಿ ಸಾಹೇಬರೆ ಮುಂದೆ ನಿಂತು ಮದುವೆ ಮಾಡಿಸಿಬಿಟ್ಟರು. ಏನು ಮಾಡೋದು, ದೇವರು ಯಾರ ಹಣೇಲಿ ಏನು ಬರೆದಿರುತ್ತಾನೋ ಅದೇ ನಡೆದು ಹೋಗೋದು. ಸೂರತ್‌ನಲ್ಲಿ ಅವನಿಗೊಂದು ಜ್ಯುವೆಲರಿ ಅಂಗಡಿ ಹಾಕಿಕೊಟ್ಟಿದ್ದೇವೆ. ದೇವರ ದಯೆಯಿಂದ ಚೆನ್ನಾಗಿ ನಡೆಯುತ್ತಿದೆ. ಮದುವೆಯಾಗಿ ಏಳು ತಿಂಗಳಿಗೆ ಗಂಡು ಮಗು ಹುಟ್ಟಿದೆ. ಎಲ್ಲಾ ನನ್ನ ತಮ್ಮನ ಹೋಲಿಕೆಗಳನ್ನು ಹೊತ್ತುಕೊಂಡಿದೆ. ಈ ವಂಶವಾಹಿನಿ ಅನ್ನೋದೇ ಒಂದು ಮಹಾನ್ ಅಚ್ಚರಿಯ ಸಂಗತಿ. ಸರಿ, ನೀವು ಬಯಸಿದಂತೆ ಗುಲಾಬಿಯನ್ನು ಮಾಡಿಕೊಡಲಾಗುತ್ತದೆ. ಮೂರು ದಿನ ಟೈಮ್ ಬೇಕು' ಎಂದಿದ್ದ ಜಯಂತಿ ಲಾಲ್.

ನಾಲ್ಕನೇ ದಿನ ಮಫತ್ಲಾಲ್ ಗುನ್ನಾಲಾಲ್ ವಿಕ್ರಂ ಜಯಂತಿ ಲಾಲ್ ಕಂಪನಿಗೆ ಹೋದಾಗ ಗುಲಾಬಿ ಸಿದ್ಧವಾಗಿತ್ತು. ಗುನ್ನಾಲಾಲ್ ತನ್ನ ಕಣ್ಣುಗಳನ್ನು ತಾನೇ ನಂಬದಂತಾಗಿದ್ದ. ತಾನು ಊಹಿಸಿದ್ದಕ್ಕಿಂತಲೂ ನೂರುಪಟ್ಟು ಚೆನ್ನಾಗಿತ್ತು ಗುಲಾಬಿ. ಕಾಮನಬಿಲ್ಲಿನ ಬಣ್ಣಗಳು ಒಂದರಲ್ಲೊಂದು ಮಿಳಿತಗೊಂಡು ವರ್ಣಿಸಲಾರದ ವಿನ್ಯಾಸವೊಂದು ರೂಪುಗೊಂಡಿತ್ತು. ಅಂದು ಸಂಜೆಯೇ ಮೊಮ್ಮಗ ಸೋನಾಲಾಲನನ್ನು ಕರೆದುಕೊಂಡು ಗೇಟ್ ವೇ ಆಫ್ ಇಂಡಿಯಾದ ಬಳಿ ಹೋಗಿದ್ದ. ಸೂರ್ಯನು ಇನ್ನೇನು ಸಮುದ್ರದಲ್ಲಿ ಮುಳುಗಲು ಸಿದ್ಧತೆ ನಡೆಸುತ್ತಿದ್ದ.

(ಸಶೇಷ)

## ಪ್ರತಿಕ್ರಿಯೆ




### ಕುತೂಹಲ ಕೆರಳಿಸಿತು

ನಾ. ದಾಮೋದರ ಶೆಟ್ಟಿ ಅವರ ಧಾರಾವಾಹಿ ಚೆನ್ನಾಗಿ ಮೂಡಿಬಂತು. ಪ್ರತಿ ಕಂತೂ ಕುತೂಹಲ ಕೆರಳಿಸುತ್ತಿತ್ತು. ಊಹಿಸಲಾಗದ ರೀತಿಯಲ್ಲಿ ಕೊಲೆಗಾರನನ್ನು ಕಂಡುಹಿಡಿದದ್ದು ಬಹಳ ಸೊಗಸಾಗಿತ್ತು. ಧಾರಾವಾಹಿಗೆ ಸಂಬಂಧಿಸಿದಂತೆ ಎಚ್.ಎಸ್. ಮೋನಪ್ಪರವರ ಚಿತ್ರಗಳು ಮನಸೆಳೆದವು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಅಂತ್ಯ ಗೋಜಲಾಗಿತ್ತು

ಪತ್ತೇದಾರಿ ಕಥೆ ಕುತೂಹಲದಿಂದ ಕೂಡಿದ್ದು ಮುಂದಿನ ಸಂಚಿಕೆಯನ್ನು ಕಾಯುವಂತೆ ಮಾಡಿತ್ತು. ಕರಿಮಾಯಿ ಗುಡ್ಡದ ನಿಗೂಢತೆ, ಕಾಫಿ ತೋಟದ ವರ್ಣನೆ, ಕಥೆಗೆ ಪೂರಕವಾಗಿ ಮೋನಪ್ಪನವರ ಕಲೆ ಅದ್ಭುತವಾಗಿತ್ತು. ಶೀಲಾಳ ಕೊಲೆಯ ರಹಸ್ಯ ಭೇದಿಸುವಲ್ಲಿ ನಟರಾಜ್ ತೆಗೆದುಕೊಳ್ಳುವ ತಿರುವು ಓದುಗರಲ್ಲಿ ತೀವ್ರ ಕುತೂಹಲ ಕೆರಳಿಸಿತ್ತು. ಆದರೂ ಅಂತ್ಯವು ಗೋಜಲು ಗೋಜಾಲಾಗಿತ್ತು.

—ಭಾರತೀ ಗಂಗಾಧರ್, ಬೆಂಗಳೂರು

### ವಿಚಿತ್ರವೆನಿಸಿದರೂ ಕುತೂಹಲಕಾರಿ

ಕಾದಂಬರಿಯ ಹೆಸರು ಮೊದಲಿಗೆ ನನಗೆ ವಿಚಿತ್ರವೆನಿಸಿತು. ಆದರೂ ಈ ಧಾರಾವಾಹಿಯನ್ನು ಓದಲು ನನ್ನನ್ನು ಪ್ರೇರೇಪಿಸಿದ್ದು, ಮೊದಲ ಸಂಚಿಕೆಗೆ ಎಚ್. ಎಸ್. ಮೋನಪ್ಪನವರು ಬಿಡಿಸಿದ್ದ ಚಿತ್ರ! ಪತ್ತೇದಾರಿ ಪ್ರಿಯಳಾದ ನನಗೆ ಈ ಧಾರಾವಾಹಿಯ ಪ್ರತಿಯೊಂದು ಕಂತು, ಏನೋ ನಿಗೂಢವೆನಿಸುತ್ತಿತ್ತು, ಮುಂದಿನ ಸಂಚಿಕೆ ಓದಲು ಕುತೂಹಲದಿಂದ ಕಾಯುವಂತೆ ಮಾಡುತ್ತಿತ್ತು.

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

### ಅನಿರೀಕ್ಷಿತ ತಿರುವು

ಧಾರಾವಾಹಿ, ಪತ್ತೇದಾರಿ ಸಿನಿಮಾದಂತೆ ಪ್ರತೀ ಸಂಚಿಕೆಯಲ್ಲಿ ಆಸಕ್ತಿ ಮೂಡಿಸುತ್ತ ಅನಿರೀಕ್ಷಿತ ತಿರುವಿನೊಂದಿಗೆ ಮುಕ್ತಾಯವಾಯಿತು.

—ರುದ್ರಮೂರ್ತಿ ಆರ್.

### ಎಲ್ಲ ಕಂತುಗಳೂ ಚೆನ್ನಾಗಿದ್ದವು

ಬಹಳ ದಿನಗಳ ನಂತರ ಒಂದು ಅದ್ಭುತ ಪತ್ತೇದಾರಿ ಕಾದಂಬರಿ ಓದಿದ ಹಾಗೆ ಆಯಿತು. ದಾಮೋದರ ಶೆಟ್ಟಿ ಅವರು ಮೊದಲನೇ ಕಂತಿನಿಂದಲೇ ನಮಗೆಲ್ಲಾ ಕುತೂಹಲ ಮೂಡಿಸಿದ್ದರು. ಎಲ್ಲಾ ಕಂತುಗಳೂ ತುಂಬಾ ಚೆನ್ನಾಗಿದ್ದವು. ಕೊನೆಯಂತೂ ನಮ್ಮೆಲ್ಲರ ಊಹೆಗೂ ಮೀರಿಸಿದಂತೆ ಇತ್ತು. ಮುಂದೆಯೂ ಇಂತಹ ಧಾರಾವಾಹಿಗಳನ್ನು ನಿರೀಕ್ಷಿಸುತ್ತೇವೆ.

—ರಾಜೇಂದ್ರ, ಬೆಂಗಳೂರು

### ಸಿನಿಮಾ ಮಾಡಬಹುದು!

ರೋಚಕ ತಿರುವುಗಳೊಂದಿಗೆ ಕುತೂಹಲ ಕೆರಳಿಸುತ್ತ ಮುಂದೆ ಸಾಗಿದ ಧಾರಾವಾಹಿ 'ಕರಿಮಾಯಿ ಗುಡ್ಡ' ಅದ್ಭುತ ಕಾದಂಬರಿ. ನಿರೀಕ್ಷೆಗೂ ಮುನ್ನ ಮುಕ್ತಾಯಗೊಂಡ ಈ ಧಾರಾವಾಹಿಯ ಕೊನೆಯ ಕಂತಿನಲ್ಲಿ ಅಪರಾಧಿಯನ್ನು ಓದುಗರ ಮುಂದೆ ಧುತ್ತೆಂದು ತಂದು ನಿಲ್ಲಿಸಿದಾಗ ಆಶ್ಚರ್ಯಚಕಿತಳಾದೆ. ಪತ್ತೇದಾರಿ ಕಾದಂಬರಿ ಹೆಣೆಯುವ ಈ ಜಾಣ್ಮೆ ಅಮೋಘ. ಇದೊಂದು ಉತ್ತಮ ಚಲನಚಿತ್ರವಾಗಬಲ್ಲುದು.

—ಸರಸ್ವತಿ ಶಂಕರ್, ಬೆಂಗಳೂರು

### 'ಯಾವ ಹುತ್ತದಲ್ಲಿ ಯಾವ ಹಾವೋ'

ಧಾರಾವಾಹಿ ಬರೀ ಎಂಟು ಕಂತುಗಳೊಂದಿಗೆ ಮುಕ್ತಾಯವಾಗಿದ್ದು ಸ್ವಲ್ಪ ಬೇಸರ ತರಿಸಿತು. ಒಂದೂವರೆ ವರ್ಷದ ಹಿಂದೆ 'ಸುಧಾ'ದಲ್ಲಿ ಪ್ರಕಟ ಆಗಿದ್ದ 'ಆಪರೇಷನ್ ಅಮ್ಮು' ಪತ್ತೇದಾರಿ ಧಾರಾವಾಹಿಯನ್ನು ಇದು ನೆನಪಿಸಿತು. ಯಾವ ಹುತ್ತದಲ್ಲಿ ಯಾವ ಹಾವೋ ಎಂಬಂತೆ ಪ್ರೊಫೆಸರ್ ಭಾಸ್ಕರ್ ಅವರೇ ತನ್ನ ಪತ್ನಿಯನ್ನು ಕೊಂದ ಕೊಲೆಗಾರ ಎಂಬುದನ್ನು ಊಹಿಸಲು ಅಸಾಧ್ಯವಾಗಿತ್ತು.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

### ಕುತೂಹಲಭರಿತ

ನಿಗೂಢ ರಹಸ್ಯವೊಂದನ್ನು ಭೇದಿಸಿ, ಅಂತ್ಯದಲ್ಲಿ ಅರಿವು ಮೂಡಿಸಿರುವ ಹಾಗೂ ಬಹಳ ಸೂಕ್ಷ್ಮವಾಗಿ ನಿರೂಪಿಸಿರುವ ಸುಂದರ ಕಥೆ. ಪ್ರತಿ ಅಧ್ಯಾಯದ ಕೊನೆಯಲ್ಲಿ ಕುತೂಹಲ ಮೂಡಿಸಿ ಮುಂದಿನ ಸಂಚಿಕೆಗೆ ಕಾಯುವಂತಾಗಿತ್ತು.

—ರಘೋತ್ತಮ ಟಿ.ವಿ., ಮೈಸೂರು

ಕೊನೆಯ ಕಂತಿನವರೆಗೂ ಕುತೂಹಲ ಕೆರಳಿಸುವಂತೆ ಮಾಡಿದ ಧಾರಾವಾಹಿ.

—ಉಷಾರಾಣಿ ಎಂ.ಎಸ್., ಬೆಳ್ತಂಗಡಿ